**ಸಾಕ್ಷಿಗೆ ಇಂದು ದಿನಾಂಕ 16.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಸಾಕ್ಷಿದಾರರ ಸ್ವ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಫಿರ್ಯಾದುದಾರನಾಗಿದ್ದು, ಈ ದಿನ ನನ್ನ ಸ್ವ ಇಚ್ಛಾ ಹೇಳಿಕೆಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಅಳವಡಿಸಿಕೊಂಡಿದ್ದೇನೆ. ಪ್ರಮಾಣಪತ್ರದ ವಿಷಯಗಳೆಲ್ಲವೂ ಸತ್ಯವಿದ್ದು, ಅದಕ್ಕೆ ನನ್ನ ಸಹಿ ಇರುತ್ತದೆ.

ದೂರುದಾರ ಕಂಪನಿಯವರು ನನಗೆ ನೀಡಿದ ಜಿ.ಪಿ.ಎ ನಕಲು ಪ್ರತಿಯನ್ನು ಹಾಜರುಮಾಡಿದ್ದೇನೆ, ಇವುಗಳನ್ನು ಕ್ರಮವಾಗಿ **ನಿ.ಪಿ.1** ಎಂದು ಗುರುತಿಸಲಾಯಿತು.

ಆಡಳಿತ ಮಂಡಳಿಯವರು ನೀಡಿರುವ ಅಧಿಕಾರ ಪತ್ರದ ನಕಲು ಪ್ರತಿಯನ್ನು ಹಾಜರುಪಿಡಿಸಿದ್ದು ಅದನ್ನು **ನಿ.ಪಿ.2** ಎಂದು ಗುರ್ತಿಸಲಾಯಿತು.

ದಿನಾಂಕಃ 06.11.2025 ರಂದು ಆರೋಪಿ ನೀಡಿದ ಚೆಕ್ ಹಾಜರುಮಾಡಿದ್ದೇನೆ, ಇದನ್ನು **ನಿ.ಪಿ.3** ಎಂದು ಗುರ್ತಿಸಲಾಯಿತು. ಚೆಕ್ ಮೇಲೆ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ಗುರ್ತಿಸಿದ್ದು, ಅದನ್ನು **ನಿ.ಪಿ.3(ಎ)** ಎಂದು ಗುರ್ತಿಸಲಾಯಿತು.

ದಿನಾಂಕಃ 07.11.2025 ರಂದು Axis Bank, Mudhol ಶಾಖೆ ಇವರು Fund Insufficient ಹಿಂಬರಹ ಹಾಜರುಮಾಡಿದ್ದೇನೆ, ಇದನ್ನು **ನಿ.ಪಿ.4** ಎಂದು ಗುರ್ತಿಸಲಾಯಿತು.

ದಿನಾಂಕಃ 19.11.2025 ರಂದು ಆರೋಪಿಗೆ ಕಳುಹಿಕೊಟ್ಟ, ನೊಂದಾಯಿತ ಅಂಚೆ ನೋಟೀಸಿನ ಪ್ರತಿಯನ್ನು ಹಾಜರು ಮಾಡಿದ್ದೇನೆ, ಇದನ್ನು **ನಿ.ಪಿ.5** ಎಂದು ಗುರ್ತಿಸಲಾಯಿತು.

ಆರೋಪಿ ಕಳುಹಿಕೊಟ್ಟ ನೊಂದಾಯಿತ ಅಂಚೆ ರಶೀದಿಯನ್ನು ಹಾಜರು ಮಾಡಿದ್ದೇನೆ, ಇದನ್ನು **ನಿ.ಪಿ.6** ಎಂದು ಗುರ್ತಿಸಲಾಯಿತು.

ದಿಃ 22.11.2025 ರಂದು ನೋಟಿಸ್ ಆರೋಪಿಗೆ ಜಾರಿಯಾದ ಬಗ್ಗೆ ಅಂಚೆ ಇಲಾಖೆಯ ಟ್ರಾಕಿಂಗ್ ರಿಪೋರ್ಟ ನ್ನು **ನಿ.ಪಿ.7** ಎಂದು ಗುರುತಿಸಲಾಯಿತು.

ಆರೋಪಿ ಸಾಲದ ಖಾತೆಗೆ ಸಂಬಂಧಪಟ್ಟಂತಹ ಅಕೌಂಟ್ಸ್ ಎಕ್ಸ್ಟ್ರ್ಯಾಕ್ಟ ದಾಖಲೆಯನ್ನು **ನಿಪಿ-8** ಎಂದು ಗುರುತಿಸಲಾಯಿತು.

ಈ ಕಾರಣ ಆರೋಪಿಯನ್ನು ಸೂಕ್ತವಾಗಿ ಶಿಕ್ಷಿಸಬೇಕೆಂದು ಹಾಗೂ ನನ್ನ ಹಣವನ್ನು ಮರಳಿಸಲು ಆದೇಶಿಸಬೇಕೆಂದು ಕೋರಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ